X **ಶ್ರೀ ಜಬ್ಬಾರ್‌ಖಾನ್ ಹೊನ್ನಳ್ಳಿ (ಅಲ್ಪ ಸಂಖ್ಯಾತರ ಕಲ್ಯಾಣ ಮತ್ತು ಯುವಜನಸೇವಾ ಸಚಿವರು) ಅವರು :-**

1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ :

1. ಕರ್ನಾಟಕ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತದ 2003-04ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳನ್ನು ಮಂಡಿಸುವುದು.

ಅಧ್ಯಕ್ಷರು : ಈಗ ಮಾನ್ಯ ಜಿ.ವಿ. ಶ್ರೀರಾಮರೆಡ್ಡಿಯವರು ಅರ್ಜಿಯನ್ನೊಪ್ಪಿಸುವುದು.

ಅರ್ಜಿಯನ್ನೊಪ್ಪಿಸುವುದು

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೇ, ಕೋಲಾರ ಜಿಲ್ಲೆಯ ರಾಬರ್ಟ್‌ಸನ್ ಪೇಟೆಯ ಗೀತಾ ಬಡಾವಣೆ ಮತ್ತು ವಿವೇಕನಗರ ಬಡಾವಣೆಗಳಲ್ಲಿ ಉಂಟಾಗುತ್ತಿರುವ ಶಬ್ದ ಮಾಲಿನ್ಯವನ್ನು ತಪ್ಪಿಸುವ ಬಗ್ಗೆ ಶ್ರೀ ಬಿ.ವಿ. ಶ್ರೀರಾಮರೆಡ್ಡಿಯವರು ಸಹಿ ಮಾಡಿರುವ ಅರ್ಜಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು : ಅರ್ಜಿಯನ್ನು ಒಪ್ಪಿಸಲಾಯಿತು.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ವಿಷಯ : *ಆಶ್ರಯ ಸಮಿತಿಗೆ ಶಾಸಕರನ್ನು ಅಧ್ಯಕ್ಷರನ್ನಾಗಿ ನೇಮಿಸುವ ಕುರಿತು ಪಂಚಾಯತ್‌ರಾಜ್ ಬಿಲ್‌ಗೆ ತಿದ್ದುಪಡಿ ತರುವುದು.*

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಸದನದಲ್ಲಿ ಹಿರಿಯ ಸಚಿವರಾದಂಥ ಶ್ರೀ ಎಂ.ಪಿ. ಪ್ರಕಾಶ್‌ರವರು ಇದ್ದಾರೆ ಮತ್ತು ಮಾನ್ಯ ಆಂಜನಮೂರ್ತಿಯವರು ಇದ್ದಾರೆ. ಈಗ ನಾನು ಸರ್ಕಾರದ ಗಮನಕ್ಕೆ ತರುವುದೇನೆಂದರೆ, ಕಳೆದ ಬಾರಿ ಬಹಳ ವ್ಯಾಪಕವಾಗಿ ಚರ್ಚೆಯಾಗಿ ಆಶ್ರಯ ಸಮಿತಿಗೆ ಶಾಸಕರ ಅಧ್ಯಕ್ಷತೆಯಲ್ಲಿ ಸಮಿತಿ ಆಗಬೇಕೆನ್ನುವುದನ್ನು ಒಪ್ಪಿಕೊಂಡು, ಅದಕ್ಕೋಸ್ಕರ ಪಂಚಾಯತ್‌ರಾಜ್ ಬಿಲ್‌ಗೆ ಅಮೆಂಡ್‌ಮೆಂಟ್ ಅನ್ನು ತರುತ್ತೇವೆ ಎಂದು ಹೇಳಿದ್ದರು. ಯಾವುದೋ ಕಾರಣಕ್ಕೆ ಅದು ಮುಂದೆ ಹೋಯಿತು. ಈ ಪಂಚಾಯತ್

ರಾಜ್ ಬಿಲ್‌ಗೆ ಅಮೆಂಡ್‌ಮೆಂಟ್ ತರದೆ ಸರ್ಕಾರ ಶಾಸಕರನ್ನು ಆಶ್ರಯ ಸಮಿತಿಗೆ ಅಧ್ಯಕ್ಷರನ್ನಾಗಿ ಮಾಡುವುದಕ್ಕೆ ಆಗುವುದಿಲ್ಲ. ಕಳೆದ ಸಲವೇ ಸರ್ಕಾರದಿಂದ ಆಶ್ರಯ ಸಮಿತಿಗೆ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಬೇಕಾಗಿತ್ತು. ಆದ್ದರಿಂದ ಈ ಬಗ್ಗೆ ನಾಳೆ-ನಾಡಿದ್ದರಲ್ಲಿ ಅಮೆಂಡ್‌ಮೆಂಟ್ ಬಿಲ್ ಅನ್ನು ಮೂವ್ ಮಾಡುತ್ತೀರಾ ಎನ್ನುವುದನ್ನು ತಾವು ದಯಮಾಡಿ ಸ್ಪಷ್ಟವಾಗಿ ಹೇಳಬೇಕು.

ಶ್ರೀ ಆಂಜನಮೂರ್ತಿ (ವಸತಿ ಸಚಿವರು) : ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಉಪ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಕಂದಾಯ ಸಚಿವರನ್ನು, ಹಿರಿಯ ಮಂತ್ರಿಗಳಾದಂಥ ಸಿಂಧ್ಯಾರವರು, ಮಾನ್ಯ ಖರ್ಗೆಯವರು ಹಾಗೂ ಶ್ರೀ ಹೆಚ್.ಕೆ. ಪಾಟೀಲರ ನೇತೃತ್ವದಲ್ಲಿ ಒಂದು ಸಂಪುಟ ಉಪಸಮಿತಿ ರಚನೆಯಾಗಿದೆ. ಅವರು ಒಂದು ವರದಿ ನೀಡಿದ ನಂತರ ಕಾನೂನಿನ ಸಾಧಕಬಾಧಕಗಳನ್ನು ಚರ್ಚಿಸಿ ನಿರ್ಧಾರ ತೆಗೆದುಕೊಳ್ಳಬೇಕಾಗುತ್ತದೆ. ಕಾರಣ, ಆದರ ಸಂಪೂರ್ಣ ಜವಾಬ್ದಾರಿಯನ್ನು ಪಂಚಾಯತ್‌ಗೆ ವಹಿಸಬೇಕೆಂದು ಕಳೆದ 2004ರಲ್ಲಿ ಈ ಸದನವೇ ತೀರ್ಮಾನ ಮಾಡಿದೆ. ಆದ್ದರಿಂದ ಈ ರೀತಿ ಸದನದಲ್ಲಿಯೇ ತೀರ್ಮಾನವಾಗಿರುವುದರಿಂದ, ನಾವು ಏಕಾಏಕಿ ಮಾಡುವುದಕ್ಕೆ ಆಗದಿರುವುದರಿಂದ ಕಾನೂನಿನ ಕೆಲವು ತೊಡರುಗಳಿರುವುದರಿಂದ ಸಾಧಕಬಾಧಕಗಳನ್ನು ಚರ್ಚಿಸಿ ಸಂಪುಟ ಉಪಸಮಿತಿ ಕೊಡತಕ್ಕಂಥ ವರದಿ ಆಧಾರದ ಮೇಲೆ ಆದಷ್ಟು ಜಾಗ್ರತೆ ಕ್ರಮ ಕೈಗೊಳ್ಳುತ್ತೇವೆಂದು ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇವೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಒಂದು ವರ್ಷದಿಂದ ಮನೆಗಳನ್ನು ಕೊಟ್ಟಿಲ್ಲ. ಇವರು ಸರ್ಕಾರದ ಕಡೆಯಿಂದ ಯಾವಾಗ ತೀರ್ಮಾನ ತೆಗೆದುಕೊಳ್ಳುತ್ತಾರೆನ್ನುವುದು ಗೊತ್ತಿಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಗಮನಿಸಬೇಕು. ಇದು ಮಾನ್ಯ ಮುಖ್ಯಮಂತ್ರಿಗಳ ಸಮಕ್ಷಮ ಒಪ್ಪಿಗೆ ಆಗಿರುವಂಥದ್ದು ಇದು ನಮ್ಮ ಹಿರಿಯ ಮಂತ್ರಿಗಳಾದ ಎಂ.ಪಿ. ಪ್ರಕಾಶ್‌ರವರಿಗೂ ಗೊತ್ತಿದೆ. ಶಾಸಕರನ್ನು ಆಶ್ರಯ ಸಮಿತಿಗೆ ಅಧ್ಯಕ್ಷರನ್ನಾಗಿ ಮಾಡಲು ಪಂಚಾಯತ್‌ರಾಜ್ ಬಿಲ್‌ಗೆ ಅಮೆಂಡ್‌ಮೆಂಟ್ ತರಬೇಕಷ್ಟೆ.

ಶ್ರೀ ಅಂಜನಮೂರ್ತಿ : ಮಾನ್ಯ ಅಧ್ಯಕ್ಷರಲ್ಲಿ ನಾನು ಮನವಿ ಮಾಡುತ್ತೇನೆ. ಕೂಡಲೇ ಇದಕ್ಕೆ ಸಂಬಂಧಪಟ್ಟಂತೆ ಒಂದು ಬಿಲ್ಲನ್ನು .....

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಈ ವಿಚಾರವನ್ನು ಚರ್ಚೆ ಮಾಡಿದ ಮೇಲೆ ಈ ಕಾನೂನಿನ ತೊಡಕಿನ ವಿಚಾರದಲ್ಲಿ ವಿವರವಾದಂಥದ್ದು ಆಗಬೇಕೆಂದು ಸಚಿವಸಂಪುಟದ ಉಪಸಮಿತಿ ಮಾನ್ಯ ಉಪಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಆಗಿದೆ. ಪ್ರಾಯಶಃ ಇನ್ನು 2 ದಿವಸದೊಳಗಾಗಿ ಮಾಡಿ ಈ ಅಧಿವೇಶನದಲ್ಲಿ ಅಂಥ ವಿಚಾರಗಳನ್ನು ಕೊಟ್ಟಂಥ ಭರವಸೆಯನ್ನು ನೆರವೇರಿಸಲಿಕ್ಕೆ ನಾವು ಕ್ರಮ ಕೈಗೊಳ್ಳುವುದರ ಬಗ್ಗೆ ತಮ್ಮ ಹತ್ತಿರ ಮಾತನಾಡುತ್ತೇವೆ.

ವಿಷಯ : ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನಲ್ಲಿ ರಾಜೋಳಿ ಬಂಡಾ ಜಲವಿದ್ಯುತ್ ಯೋಜನೆ ಬಗ್ಗೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) : ಮಾನ್ಯ ಅಧ್ಯಕ್ಷರೆ, ರಾಜೋಳಿ ಬಂಡಾ ಯೋಜನೆ ಕುರಿತಂತೆ ಇದೊಂದು ಬಹಳ ಪ್ರಮುಖವಾದ ವಿಷಯವಾಗಿದ್ದು ಇದು ನಿನ್ನೆಯ ದಿವಸ ಸಂಸತ್‌ನಲ್ಲಿ ಸಹ ಪ್ರಸ್ತಾಪವಾಗಿದೆ. ಆಂಧ್ರಪ್ರದೇಶ ರಾಜಕಾರಣದ ಪ್ರಭಾವ ಕರ್ನಾಟಕದ ಮೇಲೆ ಬೀಳುತ್ತಿದೆ. ಕರ್ನಾಟಕದ ಹಿತರಕ್ಷಣೆ ಆಗುತ್ತಿಲ್ಲ. ನಮ್ಮ ರಾಜ್ಯದ ಹಿತರಕ್ಷಣೆಯ ಬಗ್ಗೆ ನಾವು ವಿಶೇಷವಾದ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕಾದ ಅಗತ್ಯತೆ ಇದೆ. ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನಲ್ಲಿ ಈ ರಾಜೋಳಿ ಬಂಡಾ ಜಲವಿದ್ಯುತ್ ಯೋಜನೆಗೆ ಹಿಂದಿನ ಸರ್ಕಾರ ಮಂಜೂರಾತಿ ಕೊಟ್ಟು ಈಗ ಅದರ ಕೆಲಸ ಪ್ರಾರಂಭವಾಗಿದೆ. ಅದರಲ್ಲಿ ಸುಮಾರು ನಾಲ್ಕೂವರೆ ಮೆಗಾವ್ಯಾಟ್ ವಿದ್ಯುತ್ ಅನ್ನು ಉತ್ಪಾದಿಸುವಂಥ ಒಂದು ಪ್ರಮುಖವಾದಂಥ ಕಿರು ಜಲವಿದ್ಯುತ್ ಯೋಜನೆಯಾಗಿದ್ದು, ಈಗ ಅಲ್ಲಿ ಕೆಲಸ ಪ್ರಾರಂಭವಾಗಿದೆ. ಆಂಧ್ರ ಸರ್ಕಾರದವರು ಅನಗತ್ಯವಾಗಿ ನಾವು ಆ ನೀರನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದೇವೆ ಎನ್ನುವ ರೀತಿಯಲ್ಲಿ ಕರ್ನಾಟಕದ ಬಗ್ಗೆ ತಪ್ಪು ಮಾಹಿತಿ, ತಪ್ಪು ಅಭಿಪ್ರಾಯ ರೂಪಿತವಾಗುವ ರೀತಿಯಲ್ಲಿ ರಾಜ್ಯದಲ್ಲಿ ಮಾತ್ರವಲ್ಲ, ಕೇಂದ್ರದಲ್ಲಿ ಕೂಡ ಅನೇಕ ರೀತಿಯ ಕೆಲಸಕಾರ್ಯಗಳನ್ನು ಅವರು ಪರಿಣಾಮಕಾರಿಯಾಗಿ ಮಾಡುತ್ತಿದ್ದಾರೆ. ನಮ್ಮ ರಾಜ್ಯದಿಂದ ಸದರಿ ಯೋಜನೆ ಕುರಿತು ನಮ್ಮ ಸ್ಪಷ್ಟವಾದಂಥ